KARNATAKA STATE POLICE

# FIRST INFORMATION REPORT
## (Under Section 173 Bharatiya Nagarik Suraksha Sanhita)

**Before the Honourable Court of CJ & JMFC Court,Gundlupete**

1. **District :** Chamarajanagar **Circle/Sub Division :** Chamarajanagar Sub- **PS :** Gundlupete PS

   **Crime No :** 0235/2025 **FIR Date :** 09/09/2025

2. **Act & Section :** THE BHARATIYA NYAYA SANHITA (BNS), 2023
   (U/s-126(2),127(2),189(2),190,191(2),132,351(3),351(2),352,79)

3. **(a) Occurence of Offence Day :** Tuesday **From Date :** 09/09/2025 **To Date :** 09/09/2025
   **From Time :** 11:30:00 **To Time :** 12:00:00

   **(b) Information received at the PS :** 09/09/2025 19:00:00 **Written/Oral :** Others

   **(c) Reasons for Delay in reporting by the Complainant / Informant**
   ಹಿರಿಯ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ನಂತರ ದೂರು ನೀಡಿರುತ್ತಾರೆ

   **(d) General Diary reference Entry No. & Time : 7 ,** 19:00:00

4. **(a) Place of occurence with full address**
   Opposite KEB,Bommalapura Village, Gundlupete tq,Chamarajanagar ,
   Karnataka,

   **(b) Distance from PS :** Towards 20KM East

   **(c) Village :** Bommalapur a Village **Beat Name :** Beat No 12

   **(d) If the place belongs to another jurisdiction,PS. Name :**

   **District :**

5. **Complainant/Informant:**

   **(a) Name :** Gnanashekhara **Father's/Husband's Name :** Muttu T

(b) Age : 31

(c) Occupation : Govt. official non-gazetted

(d) Religion :

(e) Caste :

(f) Fax :

(g) Email : gundlupetchn@ksp.gov.in

(h) Phone No. : 9876543210

(i) Nationality : India

(j) Passport No. :

Date of Issue :

(k) Address : DRFO, STPF Platoon 1,Bandipura section,Gundlupete tq , Chamarajanagar , Karnataka

(l) Sex: Male

(m) Whether complainant has seen the occurence or merely heard of it :

ಪಿರ್ಯಾದುದಾರರು ಕೃತ್ಯವನ್ನು ನೋಡಿದ್ದಾರೆ

6. Details of known/suspected/unknown accused with full particulars(Attach separate sheet if necessary)

| Sl.No. | Name / Father Name / Caste / Address | Type | Person Type | Sex | Age | Occupation |
|---|---|---|---|---|---|---|
| 1 | Raghu(A1) ,Bommalapura Village,Gundlupet talukChamarajanagar, Karnataka | Accused | Common man | Male | | |
| 2 | Prasad(A2) ,Bommalapura Village,Gundlupet talukChamarajanagar, Karnataka | Accused | Common man | Male | | |
| 3 | Deepu(A3) ,Bommalapura Village,Gundlupete tqChamarajanagar, Karnataka | Accused | Common man | Male | | |
| 4 | Gangadara swamy(A4) ,Bommalapura Village,Gundlupete tqChamarajanagar, Karnataka | Accused | Common man | Male | | |

| | | | | | | |
|---|---|---|---|---|---|---|
| 5 | Revanna(A5) ,Bommalapura Village,Gundlupete tqChamarajanagar, Karnataka | Accused | Common man | Male | | |

7. Details of Victims with full particulars

| Sl.No. | Name | Address | Injury Type | Sex | Age | Occupation |
|---|---|---|---|---|---|---|
| 1 | Gnanashekar a | DRFO STPF Platoon 01 Bandipura Section Gundlupet tChamarajanagar Karnataka | | Male | 31 years | |
| 2 | Karthik Yadav | DRFO STPF Platoon 01 Bandipura Section Gundlupet tChamarajanagar Karnataka | | Male | | |
| 3 | Shivanna | ADS  Watcher Gundlupet Buffer ZoneChamarajanagar Karnataka | | Male | | |
| 4 | Suchithra | Beat Forest  Guard Bandipura section Gundlupet talChamarajanagar Karnataka | | Female | | |
| 5 | Subramanya | PCP Watcher Gundlupet Buffer ZoneChamarajanagar Karnataka | | Male | | |
| 6 | Nagesh | Kundakere Forest Range RFO DriverChamarajanagar Karnataka | | Male | | |
| 7 | Somu | STPF Jeep DriverChamarajanagar Karnataka | | Male | | |
| 8 | Praveen | PCP Watcher Gundlupet Buffer ZoneChamarajanagar Karnataka | | Male | | |
| 9 | Manikanta | PCP Watcher Gundlupet Buffer ZoneChamarajanagar Karnataka | | Male | | |

| | | | | | | |
|---|---|---|---|---|---|---|
| 10 | Vinay Kumar | DRFO STPF Platoon 01<br>Bandipura Section<br>Gundlupet<br>tChamarajanagar<br>Karnataka | | Male | | |
| 11 | Santhosh | Buffer Zone Beat Forest<br>Guard<br>GundlupetChamarajanag<br>ar<br>Karnataka | | Male | | |
| 12 | Rajappa | ADS  Watcher Gundlupet<br>Buffer<br>ZoneChamarajanagar<br>Karnataka | | Male | | |
| 13 | Basavegowd<br>a | Beat Forest  Guard<br>Bandipura section<br>Gundlupet<br>talChamarajanagar<br>Karnataka | | Male | | |

## 8. Particulars of Property stolen/involved with value(Attach separate sheet if necessary)

| **Sl.No.** | **Property Type** | **Item description** | **Estimated Value (in Rs.)** |
|---|---|---|---|
| 1 | | | |

**Total Value of the property Stolen / Involved :**

## 9. Inquest Report/U.D. Case No. if any :

## 10. F.I.R Contents (Attach separate sheet if necessary)

ಪಿರ್ಯಾದಿಯವರು ಠಾಣೆಗೆ ಹಾಜರಾಗಿ ಮುದ್ರಿತ ದೂರು ನೀಡಿದ್ದು ಅದರಲ್ಲಿ ನಾನು ಈಗ್ಗೆ 4 ತಿಂಗಳಿನಿಂದ ಬಂಡೀಪುರ ವಿಭಾಗದ ಹುಲಿ ಸಂರಕ್ಷಣಾ ಪಡೆಯಲ್ಲಿ ಕರ್ತವ್ಯ ನಿರ್ವಹಿಸಿಕೊಂಡಿರುತ್ತೇನೆ. ನನ್ನ ಜೊತೆಗೆ ಕಾರ್ತಿಕ್ ಯಾದವ್, ಡಿಆರ್ಎಫ್ಓ, ವಿನಯ್ ಕುಮಾರ್, ಡಿಆರ್ಎಫ್ಐ, ಬಸವೇಗೌಡ, ಗಸ್ತು ವನಪಾಲಕ, ಸುಚಿತ್ರಾ, ಗಸ್ತು ವನಪಾಲಕಿ, ಸೋಮು, ಚಾಲಕ ರವರುಗಳ ಜೊತೆಗೆ ಕರ್ತವ್ಯ ನಿರ್ವಹಿಸಿಕೊಂಡಿರುತ್ತಾರೆ. ನಾವು ಈಗ್ಗೆ 2 ತಿಂಗಳ ಹಿಂದೆ ಹುಲಿ ಕಾರ್ಯಾಚರಣೆಗಾಗಿ ಬೊಮ್ಮಲಾಪುರ ಗ್ರಾಮದ ಕೆ.ಇ.ಬಿ ಎದುರಿಗೆ ಇರುವ ಗಂಗಾಧರಸ್ವಾಮಿ ರವರ ಜಮೀನಿನಲ್ಲಿ ತುಮಕೂರು ಹುಲಿ ಬೋನನ್ನು ಇರಿಸಿದ್ದೆವು. ಈ ದಿನ ದಿನಾಂಕ 09/09/2025 ಬೆಳಿಗ್ಗೆ ಸುಮಾರು 11.30 ಗಂಟೆಯ ಸಮಯದಲ್ಲಿ ನಾನು ಮತ್ತು ನಮ್ಮ ತಂಡದ ಕಾರ್ತಿಕ್ ಯಾದವ್, ಡಿಆರ್ಎಫ್ಓ, ವಿನಯ್ ಕುಮಾರ್, ಡಿಆರ್ಎಫ್ಓ, ಬಸವೇಗೌಡ, ಗಸ್ತು ವನಪಾಲಕ, ಸುಚಿತ್ರಾ, ಗಸ್ತು ವನಪಾಲಕಿ, ಸೋಮು, ಚಾಲಕ ರವರುಗಳ ಜೊತೆಗೆ ಜೀಪ್ ಸಂಖ್ಯೆ ಕೆ.ಎ-10 ಜಿ-0494 ರ ಇಲಾಖಾ ವಾಹನದಲ್ಲಿ ಬೊಮ್ಮಲಾಪುರ ಗ್ರಾಮದ ಕೆ.ಇ.ಬಿ. ಯಿಂದ ಸ್ವಲ್ಪ ಮುಂದೆ ಕಾರ್ಯಾಚರಣೆಗಾಗಿ ಬೊಮ್ಮಲಾಪುರ ಕಡೆಯಿಂದ ಒಡೆಯನಪುರ ಗ್ರಾಮದ ಕಡೆಗೆ ತೆರಳುತ್ತಿದ್ದಾಗ ಬೊಮ್ಮಲಾಪುರ ಗ್ರಾಮದ ರಘು, ಪ್ರಸಾದ್, ದೀಪು, ಗಂಗಾಧರಸ್ವಾಮಿ ಹಾಗೂ ರೇವಣ್ಣರವರುಗಳು ನಾವು ಜೀಪಿನಲ್ಲಿ ಹೋಗುತ್ತಿದ್ದಾಗ ಕೆ.ಇ.ಬಿ ಮುಂದೆ ನಿಂತಿದ್ದರು. ನಾವುಗಳು ಒಡೆಯನಪುರದ ಕಡೆಗೆ ಹೋಗಿ ವಾಪಸ್ ಬೊಮ್ಮಲಾಪುರ ಕಡೆಗೆ ಬರುತ್ತಿದ್ದಾಗ ಐದು ಜನರೂ ಸೇರಿಕೊಂಡು ನಮ್ಮನ್ನು ಹಿಂಬಾಲಿಸಿಕೊಂಡು ಕೈ ತೋರಿದರೂ ನೀವುಗಳು ಜೀಪನ್ನು ನಿಲ್ಲಿಸಲಿಲ್ಲ. ಬನ್ನಿ ಕೆಳಕೆ ಇಳಿಯಿರಿ ಜೀಪ್ಪಿಂದ ನಿಮಗೆಲ್ಲಾ ಬುದ್ಧಿ

ಕಲಿಸುತ್ತೇವೆ, ಕೆಳಕ್ಕೆ ಇಳಿಯಿರಿ ಎಂದು ಜೀಪ್‌ನಲ್ಲಿದ್ದ ಮಹಿಳೆ ಸುಚಿತ್ರಾರವರು ಸೇರಿದಂತೆ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ನಾವುಗಳು ಜೀಪಿನಿಂದ ಕೆಳಕ್ಕೆ ಇಳಿದಾಗ ನಮ್ಮ ಜೀಪ್‌ನ ಸ್ಟೆಪ್ನಿ ಸೇರಿದಂತೆ ಜೀಪ್‌ನ 5 ಚಕ್ರಗಳ ಗಾಳಿ ತೆಗೆದರು. ಅಷ್ಟಕ್ಕೆ ಅಲ್ಲಿಗೆ ಬಂದ ಕುಂದಕೆರೆ ವಲಯದ ಬೊಮ್ಮಲಾಪುರ ಕಡೆಯಿಂದ ಚಾಮರಾಜನಗರ ಕಡೆಗೆ ತೆರಳುತ್ತಿದ್ದ ಇಲಾಖಾ ಜೀಪ್ ಸಂಖ್ಯೆ ಕೆ.ಎ-45 ಜಿ-042 ರ ಜೀಪನ್ನು ಸಹಾ ತಡೆಯಲು ಹೋದರು. ಚಾಲಕ ನಾಗೇಶ್‌ರವರು ಭಯಗೊಂಡು ಜೀಪ್ ನಿಲ್ಲಿಸದೇ ವಡೆಯನಪುರ ಕಡೆಗೆ ಹೋದಾಗ ಐದು ಜನರೂ ಸೇರಿಕೊಂಡು ಬೈಕ್‌ನಲ್ಲಿ ಜೀಪ್ ಹಿಂಬಾಲಿಸಿಕೊಂಡು ವಾಪಸ್ ನಾವಿದ್ದ ಸ್ಥಳಕ್ಕೆ ಕರೆದುಕೊಂಡು ಜೀಪ್‌ನ ಚಾಲಕನನ್ನು ಕೆಳಕ್ಕೆ ಇಳಿಸಿ ಚಾಲಕ ನಾಗೇಶ್ ತಾನು ಚಾಮರಾಜನಗರ ಆರ್.ಟಿ.ಓ ಕಛೇರಿಗೆ ಹೋಗುತ್ತಿದ್ದೇನೆ ಎಂದು ಹೇಳಿದರೂ ಕೇಳದೇ ಜೀಪ್‌ನ ಎಲ್ಲಾ ಚಕ್ರದ ಗಾಳಿ ತೆಗೆದರು. ಆಗಾಗಲೇ ಬೊಮ್ಮಲಾಪುರ ಕೆ.ಇ.ಬಿ ಹತ್ತಿರ ಇದ್ದ ಗುಂಡ್ಲುಪೇಟೆ ವಲಯದ ಇಲಾಖಾ ಜೀಪ್ ಸಂಖ್ಯೆ ಕೆ.ಎ-10 ಜಿ-0523 ರ ಜೀಪಿನ ಚಕ್ರದ ಗಾಳಿಯನ್ನು ಸಹ ತೆಗೆದು ನಿಲ್ಲಿಸಿದ್ದರು. ನಂತರ ಎಲ್ಲರೂ ಸೇರಿಕೊಂಡು ನನ್ನನ್ನೂ ಚಾಲಕ ನಾಗೇಶ್ ಸೇರಿದಂತೆ ಕಾರ್ತಿಕ್ ಯಾದವ್, ಡಿಆರ್‌ಎಫ್‌ಓ, ವಿನಯ್ ಕುಮಾರ್, ಡಿಆರ್‌ಎಫ್‌ಓ, ಬಸವೇಗೌಡ, ಗಸ್ತು ವನಪಾಲಕ, ಸುಚಿತ್ರಾ, ಗಸ್ತು ವನಪಾಲಕಿ, ಸೋಮು, ಚಾಲಕ ನಮ್ಮೆಲ್ಲರನ್ನೂ ಬೋನ್ ಹತ್ತಿರ ನಡೆಯಿರಿ ಎಂದು ನಮ್ಮನ್ನು ತಳ್ಳಿಕೊಂಡು ಹೋದರು. ನಾವು ಬೋನ್ ಬಳಿಗೆ ಹೋದಾಗ ಗುಂಡ್ಲುಪೇಟೆಯ ನಮ್ಮ ಇಲಾಖೆಯವರಾದ ಸಂತೋಷ್, ಹೊರಗುತ್ತಿಗೆ ಸಿಬ್ಬಂದಿಯವರಾದ ಮಣಿಕಂಠ, ಪ್ರವೀಣ್, ಸುಬ್ರಹ್ಮಣ್ಯ, ಶಿವಣ್ಣ, ರಾಜಪ್ಪ ರವರುಗಳು ಸಹಾ ಇದ್ದರು. ಈ ಐದು ಜನರು ಸೇರಿಕೊಂಡು ನೀವು ಹುಲಿ ಹಿಡಿಯುವ ಬದಲು ನೀವೇ ಬೋನಿನಲ್ಲಿರಿ ಎಂದು ನಮ್ಮನ್ನೆಲ್ಲಾ ನಾವು ಇರಿಸಿದ್ದ ಹುಲಿ ಬೋನ್‌ನ ಒಳಗೆ ತಳ್ಳಿ ನಿಮ್ಮ ಮೇಲಾಧಿಕಾರಿಗಳು ಬರುವವರೆಗೆ ಇರಿ ಎಂದು ಹೊರಗಿನಿಂದ ಲಾಕ್ ಮಾಡಿಕೊಂಡರು. ನಾವು ಬೋನ್‌ನ ಒಳಗೆ ಇದ್ದಾಗ ಬೋನ್ ಸುತ್ತಲೂ ಸೌದೆಗಳನ್ನು ತಂದು ಹಾಕಿ ನಿಮ್ಮನ್ನು ಜೀವಂತವಾಗಿ ಸುಟ್ಟು ಹಾಕುತ್ತೇವೆ ಎಂದು ಕೂಗಾಡುತ್ತಿದ್ದರು. ನಾನು ವಿಚಾರವನ್ನು ನಮ್ಮ ಎ.ಸಿ.ಎಫ್ ರವರಿಗೆ ಮೊಬೈಲ್ ಮೂಲಕ ವಿಚಾರ ತಿಳಿಸಿದ್ದು ಸ್ಥಳಕ್ಕೆ ಸ್ಥಳೀಯ ಪೊಲೀಸರ ಜೊತೆಗೆ ಬರುವಷ್ಟರಲ್ಲಿ ಗ್ರಾಮದ ಕೆಲ ಸ್ಥಳೀಯರು ನಮ್ಮನ್ನು ಬೋನಿನಿಂದ ಹೊರಗೆ ಬಿಟ್ಟರು. ನಮ್ಮ ಎಸಿಎಫ್ ರವರಾದ ನವೀನ್‌ಕುಮಾರ್ ಹಾಗೂ ಸುರೇಶ್‌ರವರು, ಆರ್‌ಎಫ್‌ಓ ಶಿವಕುಮಾರ್ ರವರು ಸ್ಥಳಕ್ಕೆ ಬಂದ ನಂತರ ಮಾತುಕತೆ ನಡೆಸಿ ಹುಲಿ ಸೆರೆ ಹಿಡಿಯಲು ಕಾರ್ಯಾಚರಣೆ ನಡೆಸುತ್ತೇವೆ ಎಂದು ಹೇಳಿದ ನಂತರ ಅಲ್ಲಿಂದ ಎಲ್ಲರೂ ತೆರಳಿದರು.

ಅರಣ್ಯ ಇಲಾಖೆಯ ಸರ್ಕಾರಿ ಅಧಿಕಾರಿಯಾದ ನಾನು ನನ್ನ ತಂಡದ ಇತರೆ ಸದಸ್ಯರ ಜೊತೆಗೆ ಹುಲಿ ಕಾರ್ಯಾಚರಣೆಯ ಕರ್ತವ್ಯದಲ್ಲಿದ್ದಾಗ ನಮ್ಮ ಜೀಪನ್ನು ಅಡ್ಡಗಟ್ಟಿ ಸರ್ಕಾರಿ ಕರ್ತವ್ಯದಲ್ಲಿದ್ದ ನನ್ನನ್ನು ಹಾಗೂ ನನ್ನ ತಂಡದ ಸದಸ್ಯರನ್ನು ಹಾಗೂ ಗುಂಡ್ಲುಪೇಟೆ ವಲಯದ ಅರಣ್ಯ ಇಲಾಖೆಯ ಸಿಬ್ಬಂದಿಯವರನ್ನು ಹಾಗೂ ಕುಂದಕೆರೆ ವಲಯದ ಚಾಲಕ ನಾಗೇಶ್‌ರವರನ್ನು ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ, ನಮ್ಮನ್ನು ಬಲವಂತವಾಗಿ ಹುಲಿ ಕಾರ್ಯಾಚರಣೆಗೆ ಇರಿಸಿದ್ದ ಬೋನ್‌ನ ಒಳಗೆ ಅಕ್ರಮ ಬಂಧನದಲ್ಲಿರಿಸಿ ನಿಮ್ಮನ್ನು ಜೀವಂತವಾಗಿ ಸುಟ್ಟುಹಾಕುವುದಾಗಿ ಸಾರ್ವಜನಿಕವಾಗಿ ಪ್ರಚೋದನೆ ಮಾಡಿರುವ ಬೊಮ್ಮಲಾಪುರ ಗ್ರಾಮದ ರಘು, ಪ್ರಸಾದ್, ದೀಪು, ಗಂಗಾಧರಸ್ವಾಮಿ ಹಾಗೂ ರೇವಣ್ಣರವರುಗಳ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ನಮ್ಮ ಹಿರಿಯ ಅಧಿಕಾರಿಗಳ ಜೊತೆಗೆ ಸಮಾಲೋಚನೆ ನಡೆಸಿ ಬಂದು ದೂರು ನೀಡಿರುತ್ತೇನೆ.

**11. (a) Action Taken :** Investigation

**(b) Is the F.I.R read over and explained in his/her language to the complainant and a copy given to the complainant free of cost? :** Yes

**(c) If the Police Officer does not proceed to the spot for investigation or if he declines to investigate.**
**U/S 157 Cr.PC provision (a)or (b) / 176 Bharatiya Nagarik Suraksha Sanhita (BNSS) the reasons there of should be mentioned :**

**investigation**

**12. Signature/Thumb impression of the complainant**

**13. Date and time of dispatch to the Court :** 09/09/2025 19:30:00

**14. Name of PC/HC who carried the FIR to the Court :** JAGADISH , HC HC 37

**Read Over and Found to be correct**

**Date and Time :** 09/09/2025 19:10:00

**Signature of the SHO**

**Name:** SHIVAKUMAR M - HC HC 43

**Copy to :** Superintendent of Police/Commissioner of Police